'ಹೌದು, ಏಕೆ ಲಹನಾ? ಎಂಥ ಆಪತ್ತು ಎದುರಾಯಿತು! ತುಸು ಕಣ್ಣು ಮುಚ್ಚಲು ಕೊಟ್ಟಿದ್ದರಾಗಿತ್ತು.'

4

'ಎಚ್ಚರಾಗು. ಆಪತ್ತು ಎದುರಾಗಿದೆ. ಲಪಟನನ ವರ್ದಿ ಧರಿಸಿಕೊಂಡು ಬಂದಿದೆ.'

'ಏನು?'

'ಲಪಟನ ಸಾಹೇಬರು ಒಂದೋ ಕೊಲ್ಲಲ್ಪಟ್ಟಿದ್ದಾರೆ, ಇಲ್ಲ ಬಂದಿಯಾಗಿದ್ದಾರೆ. ಅವರ ವರ್ದಿ ಧರಿಸಿಕೊಂಡು ಯಾರೊ ಜರ್ಮನ ಬಂದಿದ್ದಾನೆ. ಸುಬೇದಾರರು ಅವನ ಮುಖ ನೋಡಿಲ್ಲ. ನಾನು ನೋಡಿದ್ದೇನೆ ಮತ್ತು ಅವನ ಜೊತೆ ಮಾತನಾಡಿದ್ದೇನೆ. ಸೂಳೆಮಗ, ಸ್ಪಷ್ಟವಾಗಿ ಉರ್ದು ಮಾತನಾಡುತ್ತಾನೆ, ಆದರೆ ಪುಸ್ತಕೀಯ ಉರ್ದು. ಮತ್ತೆ ನನಗೆ ಸೇದಲು ಸಿಗರೇಟ ಕೊಟ್ಟಿದ್ದಾನೆ.'

'ಅಂದರೆ ನಾವು ಪೆಟ್ಟು ತಿಂದೆವು. ಮೋಸವಿದು. ಸುಬೇದಾರ ಕೆಸರಿನಲ್ಲಿ ಚಕ್ಕರ ಹಾಕುತ್ತಾ ತಿರುಗುವರು ಮತ್ತು ಇಲ್ಲಿ ಕಣಿವೆಯ ಮೇಲೆ ದಾಳಿ ಮಾಡಲಾಗುವದು. ಅಲ್ಲಿ ಅವರ ಮೇಲೆ ಬಯಲಲ್ಲಿ ದಾಳಿಯಾಗುವದು. ಏಳು, ಒಂದು ಕೆಲಸ ಮಾಡು. ಸೇನೆಯ ಹಜ್ಜೆ ಗುರುತುಗಳನ್ನು ನೋಡುತ್ತ ನೋಡುತ್ತ ಓಡಿಹೋಗು. ಇನ್ನೂ ತುಂಬ ದೂರ ಹೋಗಿರಲಾರರು. ಕೂಡಲೇ ತಿರುಗಿ ಬರಬೇಕೆಂದು ಸುಬೇದಾರರಿಗೆ ಹೇಳು. ಕಣಿವೆಯ ಮಾತು ಸುಳ್ಳು. ಹೊರಟು ಹೋಗು, ಕಣಿವೆಯ ಹಿಂಬದಿಯಿಂದ ಹೊರಟು ಹೋಗು. ಎಲೆಗಳ ಸದ್ದು ಕೂಡ ಆಗದಂತೆ. ತಡ ಮಾಡಬೇಡ.'

'ಹುಕುಮ ಹೀಗಿದೆ, ಇಲ್ಲಿಯೆ...'

'ಹುಕುಮಗೆ ಹೊಡಿ ಗುಂಡು. ನನ್ನ ಹುಕುಮ. ಜಮಾದಾರ ಲಹನಾಸಿಂಹ, ಈ ಸಮಯ ಇಲ್ಲಿಯ ಎಲ್ಲರಿಗಿಂತ ದೊಡ್ಡ ಆಫೀಸರ, ಅವನ ಹುಕುಮ. ನಾನು ಲಪಟನ ಸಾಹೇಬನನ್ನು ವಿಚಾರಿಸಿಕೊಳ್ಳುತ್ತೇನೆ.'

'ಆದರೆ ಇಲ್ಲಿ-ನೀವುಗಳು ಕೇವಲ ಎಂಟು ಜನರಷ್ಟೆ.'

'ಎಂಟಲ್ಲ, ಹತ್ತು ಲಕ್ಷ. ಒಬ್ಬೊಬ್ಬ ಅಕಾಲಿಯಾ ಸಿಖ್ ಸವಾ ಲಕ್ಷಕ್ಕೆ ಸಮನಿದ್ದಾನೆ. ಹೊರಟು ಹೋಗು.'

ತಿರುಗಿ ಬಂದು ಕಣಿವೆ ಮೇಲ್ಭಾಗದಲ್ಲಿ ಲಹನಾಸಿಂಹ ಗೋಡೆಗೆ ತಾಗಿಕೊಂಡು ನಿಂತುಕೊಂಡನು. ಲಪಟನ ಸಾಹೇಬ ಜೇಬಿನಿಂದ ಬೆಳವಲ ಹಣ್ಣಿನಷ್ಟು ದೊಡ್ಡ ಮೂರು ಗುಂಡುಗಳನ್ನು ತೆಗೆದನು. ಮೂರನ್ನು ಕಣಿವೆಯ ಗೋಡೆಯಲ್ಲಿ ಅಲ್ಲಲ್ಲಿ ತುರುಕಿದ ಮತ್ತು ಮೂರು ಗುಂಡುಗಳನ್ನು ಒಂದು ತಂತಿಯಂಥದರಿಂದ ಕಟ್ಟಿದ. ತಂತಿಯಂಥದರ ಮುಂದಿನ ಭಾಗದಲ್ಲಿ ಒಂದು ಗಂಟಿತ್ತು. ಅದನ್ನು ಅಗ್ಗಿಷ್ಟಿಕೆಯ ಹತ್ತಿರ ಇಟ್ಟನು. ಅನಂತರ ಹೊರಗೆ ಹೋಗಿ ಒಂದು ಬೆಂಕಿ ಕಡ್ಡಿಯನ್ನು ಹೊತ್ತಿಸಿ ಗಂಟಿನ ಮೇಲಿಡಲು...

ಮಿಂಚಿನಂತೆ ಎರಡೂ ಕೈಗಳಿಂದ ಬಂದೂಕನ್ನು ಉಲ್ಟಾ ಎತ್ತಿಕೊಂಡು ಲಹನಾಸಿಂಹನು ಸಾಹೇಬನ ಮೊಣಕೈಗೆ ತಿವಿದನು. ಥಟ್ಟನೆ ಸಾಹೇಬನ ಕೈಯಿಂದ ಬೆಂಕಿಕಡ್ಡಿ ಕೆಳಗೆ ಬಿದ್ದಿತು. ಲಹನಾಸಿಂಹನು ಸಾಹೇಬನ ಕುತ್ತಿಗೆಯ ಮೇಲೆ ಗುದ್ದಿದ ಮತ್ತೆ ಸಾಹೇಬನು 'ಓ ಮೈ ಗಾಡ್?' ಎನ್ನುತ್ತ ನೆಲಕ್ಕುರುಳಿದ. ಲಹನಾಸಿಂಹನು ಮೂರು ಗುಂಡುಗಳನ್ನು ತೆಗೆದು ಕಣಿವೆಯ ಹೊರಗೆ ಎಸೆದನು ಮತ್ತು ಸಾಹೇಬನನ್ನು ಎಳೆದುಕೊಂಡು ಹೋಗಿ ಅಗ್ಗಿಷ್ಟಿಕೆಯ ಹತ್ತಿರ ಮಲಗಿಸಿದ. ಜೇಬುಗಳನ್ನು ಹುಡುಕಾಡಿದನು. ಮೂರು-ನಾಲ್ಕು ಅಂಚೆ ಲಕೋಟೆಗಳು ಮತ್ತು ಒಂದು ಡಾಯರಿ ತೆಗೆದು ಅವುಗಳನ್ನು ತನ್ನ ಜೇಬಿಗಿಳಿಸಿದನು.

ಸಾಹೇಬನ ಮೂರ್ಛೆ ದೂರಾಯಿತು. ಲಹನಾಸಿಂಹ ನಕ್ಕು ಹೇಳಿದ-'ಹೇಗೆ ಲಪಟನ ಸಾಹೇಬರೆ! ಆರೋಗ್ಯ ಹೇಗಿದೆ? ಇಂದು ಬಹಳಷ್ಟು ಮಾತುಗಳನ್ನು ಕಲಿತೆ. ಸಿಖ್ಖರು ಸಿಗರೇಟ ಸೇದುವರು. ಜಗಾಧಾರಿಯ ಜಿಲ್ಲೆಯಲ್ಲಿ ನೀಲಹಸುಗಳು ಇರುತ್ತವೆ ಮತ್ತು ಅವುಗಳಿಗೆ ಎರಡು ಫೂಟು ನಾಲ್ಕು ಇಂಚಿನ ಕೊಂಬುಗಳಿರುತ್ತವೆ. ಮುಸಲ್ಮಾನ ಅಡಿಗೆಯವನು ಮೂರ್ತಿಗಳಿಗೆ ಜಲತರ್ಪಣ ಮಾಡುತ್ತಾನೆ ಮತ್ತು ಲಪಟನ ಸಾಹೇಬರು ಕತ್ತೆ ಸವಾರಿ ಮಾಡುತ್ತಾರೆ, ಎಂದೆಲ್ಲ ವಿಚಾರಗಳನ್ನು ತಿಳಿದುಕೊಂಡೆ. ಆದರೆ ಇದನ್ನಾದರು ಹೇಳು, ಇಂಥ ಸ್ಪಷ್ಟ ಉರ್ದು ಎಲ್ಲಿ ಕಲಿತು ಬಂದೆ? ನಮ್ಮ ಲಪಟನ ಸಾಹೇಬರಂತೂ 'ಡ್ಯೆಮ' ಎನ್ನದೆ ಐದು ಶಬ್ದಗಳನ್ನು ಹೇಳುತ್ತಿರಲಿಲ್ಲ.'

ಲಹನಾ ಪ್ಯಾಂಟಿನ ಜೇಬುಗಳನ್ನು ಹುಡುಕಾಡಿರಲಿಲ್ಲ. ಚಳಿಯಿಂದ ರಕ್ಷಿಸಿಕೊಳ್ಳಲೆನ್ನುವಂತೆ ಸಾಹೇಬನು ಎರಡೂ ಕೈಗಳನ್ನು ಜೇಬಿನಲ್ಲಿಳಿಸಿದನು.

ಲಹನಾಸಿಂಹ ಹೇಳುತ್ತ ಹೋದನು-ತುಂಬಾ ಚಾಲಾಕ ಇದ್ದೀಯಾ, ಆದರೆ ಮಾಝಾದ ಲಹನಾ ಇಷ್ಟು ವರುಷ ಲಪಟನ ಸಾಹೇಬರೊಂದಿಗೆ ಇದ್ದಾನೆ.